ಕರ್ನಾಟಕ ವಿಧಾನ ಸಭೆ

937 ಶ್ರೀ ಚಾರ್ಜ್ ಕೆ.ಜೆ. (ಸರ್ವಜ್ಞನಗರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ವಜ್ಞನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೆಚ್.ಬಿ.ಆರ್. ಲೇಔಟ್‌ನ ಹೆಣ್ಣೂರು ಕೆರೆಯ ಅರಣ್ಯ ಜಮೀನಿನ ಅಭಿವೃದ್ಧಿಗೆ ಸರ್ಕಾರ ಕ್ರಮ ಕೈಗೊಂಡಿದೆಯೇ (ವಿವರ ಒದಗಿಸುವುದು);

ಆ) ಹೆಣ್ಣೂರು ಕೆರೆಯ ಅರಣ್ಯ ಜಮೀನನ್ನು ಅಭಿವೃದ್ಧಿಪಡಿಸಲು ಬಿ.ಡಿ.ಎ.ಗೆ ಹಸ್ತಾಂತರಿಸಲು ಕಂದಾಯ ಇಲಾಖೆಯಿಂದ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ (ವಿವರ ನೀಡುವುದು);

ಶ್ರೀ ಸಿ.ಪಿ. ಯೋಗೇಶ್ವರ (ಅರಣ್ಯ ಸಚಿವರು) :

ಅ) ಹೌದು, ಸರ್ಕಾರಿ ಆದೇಶ ಸಂಖ್ಯೆ:PWD 82 IMB 85, ಬೆಂಗಳೂರು ದಿನಾಂಕ:11–02–1988 ರ ಪ್ರಕಾರ ಹೆಣ್ಣೂರು ಕೆರೆಯನ್ನು ಅರಣ್ಯ ಇಲಾಖೆಗೆ ಹಸ್ತಾಂತರವಾಯಿತು. ಹೆಣ್ಣೂರು ಕೆರೆಯ ವಿಸ್ತೀರ್ಣ ಸುಮಾರು 23.69 ಹೆ ಇದ್ದು, ಇದರಲ್ಲಿ ಕೆರೆಯನ್ನು ಒತ್ತುವರಿದಾರರಿಂದ ರಕ್ಷಿಸುವ ದೃಷ್ಟಿಯಿಂದ ಕೆರೆಯ ಸುತ್ತಲೂ "ಚೈನ್ ಲಿಂಕ್ ಫೆನ್ಸಿಂಗ್" ಮಾಡಿ ಕೆರೆಯಲ್ಲಿ ನೆಡುತೋಪು ಬೆಳೆಸಿ ಘೋಷಿಸಲಾಗಿದೆ, ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲಾಗಿದೆ ಹಾಗೂ ಸದರಿ ಪ್ರದೇಶದಲ್ಲಿ ಈಗಾಗಲೇ ಇಲಾಖಾವತಿಯಿಂದ ನೆಡುತೋಪುಗಳನ್ನು ಬೆಳೆಸಿ ಅಭಿವೃದ್ಧಿಪಡಿಸಲಾಗಿರುತ್ತದೆ. ಈ ಕೆರೆಯ ಒಂದು ಭಾಗದಲ್ಲಿ ವಲಯ ಅರಣ್ಯಾಧಿಕಾರಿ ಕಛೇರಿ ಇದ್ದು, ಕೆರೆಯ ಸುತ್ತಲೂ ಚೈನ್‌ಲಿಂಕ್ ಮೆಶ್‌ನ್ನು ರಕ್ಷಣೆಗಾಗಿ ಅಳವಡಿಸಲಾಗಿದೆ. ಆದ್ದರಿಂದ ಗಿಡಗಳು ಬಹಳ ಸಮೃದ್ಧಿಯಾಗಿ ಬೆಳೆದಿದ್ದು, ಸುತ್ತಮುತ್ತಲಿನ ಜನರಿಗೆ ಒಳ್ಳೆಯ ವಾತಾವರಣ ನಿರ್ಮಿಸಿದೆ. ಸದರಿ ಸ್ಥಳದಲ್ಲಿ ಸಾರ್ವಜನಿಕ ಪ್ರವೇಶ ಇಲ್ಲದೆ ಇರುವುದರಿಂದ ಯಾವುದೇ ಮರಗಳು ಕಡಿತಲೆಯಾಗಿ ರುವುದಿಲ್ಲ ಮತ್ತು ಸದರಿ ಮರಗಳಿಂದ ಬಂದ ಬೀಜಗಳಿಂದ ಮತ್ತೆ ಸಸ್ಯ ಸಂತಾನ ಅಭಿವೃದ್ಧಿಯಾಗುತ್ತದೆ. ಅಲ್ಲದೇ ಕೆರೆ ಅಂಗಳದಲ್ಲಿ ಔಷಧೀಯ ಸಸ್ಯವನ ಬೆಳೆಸಿದ್ದು, ಇದು ಅಪರೂಪವಾದ ಸಂಗ್ರಹವಾಗಿದೆ. ಔಷಧೀಯ ಗಿಡಗಳಾದ ಚಕ್ರಮುನಿ, ಅಶ್ವಗಂಧ, ಬಿಲ್ವಪತ್ರ, ತುಲಸಿ, ಅಮೃತಬಳ್ಳಿ, ಗೋರಂಟಿ ಮುಂತಾದ ಇತರೆ ಜಾತಿಯ ಸಸಿಗಳು ಇರುತ್ತವೆ.

ಅ) ಸರ್ಕಾರಿ ಆದೇಶ ಸಂಖ್ಯೆ ಅಪಜೀ 139 ಇಸಿಒ 2008 ಬೆಂಗಳೂರು, ದಿನಾಂಕ: 19.4.2010ರ ಪ್ರಕಾರ ಹೆಣ್ಣೂರು ಕೆರೆ, ಮಡಿವಾಳ, ಜಾರಕಬಂಡೆ ಕಾವಲ್, ಮೈಲಸಂದ್ರ ಮತ್ತು ಪುಟ್ಟೇನಹಳ್ಳಿ ಕೆರೆಗಳನ್ನು ಮಾತ್ರ ಅರಣ್ಯ ಇಲಾಖೆಯಲ್ಲಿಯೇ ಉಳಿಸಿಕೊಂಡು ಉಳಿದ ಕೆರೆಗಳನ್ನು ಬಿಡಿಎ ಮತ್ತು ಬಿಬಿಎಂಪಿಗೆ ಹಸ್ತಾಂತರಿಸಲಾಗಿದೆ. ಆದ್ದರಿಂದ ಹೆಣ್ಣೂರು ಕೆರೆಯನ್ನು ಬಿ.ಡಿ.ಎ. ಗೆ ಹಸ್ತಾಂತರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮಣ್ಣು ಕುಸಿದು ಕಾರ್ಮಿಕರ ಸಾವು

579 (948) ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ವ್ಯಾಪ್ತಿಯ ಹುಳಿಮಾವು ಸಮೀಪದ ಆರಾಧನಾ ಲೇಔಟ್‌ನಲ್ಲಿ ಬಿಡಬ್ಲ್ಯೂ ಎಸ್‌ಎಸ್‌ಬಿ ಗೆ ಸೇರಿದ ಒಳಚರಂಡಿ ಕಾಮಗಾರಿ ವೇಳೆ ಮಣ್ಣು ಕುಸಿದು ಇಬ್ಬರು ಕೂಲಿ ಕಾರ್ಮಿಕರು ಮೃತಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸಾವಿಗೆ ಹೊಣೆಗಾರರು ಯಾರು; ಸರ್ಕಾರವೋ ಅಥವಾ ಕಾಮಗಾರಿ ಹೊಣೆ ಹೊತ್ತ ಹುತ್ತಿಗೆದಾರರೋ;

ಇ) ಈ ದುರ್ದೈವಿ ಕುಟುಂಬಕ್ಕೆ ಸರ್ಕಾರ/ ಇಲಾಖೆ ಪರಿಹಾರ ನೀಡಿದೆಯೇ; ಹಾಗಿದ್ದಲ್ಲಿ ಪರಿಹಾರದ ಮೊತ್ತವೆಷ್ಟು? (ವಿವರ ನೀಡುವುದು);

ಈ) ಕಟ್ಟಡ ಕಾರ್ಮಿಕರ ಗುರುತಿನ ಚೀಟಿ ವಿಮಾ ಯೋಜನೆಯಲ್ಲಿರುವಾಗ ಕಾರ್ಡು ಉಳ್ಳವರಿಗೆ ಕೂಲಿ ಯೋಜನೆಯನ್ನು ಸರ್ಕಾರ ಕಟ್ಟುನಿಟ್ಟಾಗಿ ಏಕೆ ಜಾರಿಗೊಳಿಸಬಾರದು? ಈ ಯೋಜನೆಯನ್ನು ಜಾರಿಗೊಳಿಸಲು ಇರುವ ತೊಡಕುಗಳೇನು;

ಉ) ಸರ್ಕಾರದ ಮತ್ತು ಮಹಾನಗರ ಪಾಲಿಕೆಯ ಕಾಮಗಾರಿಗಳನ್ನು ಮಾಡಿಸುವಾಗ ಈ ನಿಯಮವನ್ನು ಜಾರಿಗೊಳಿಸುವುದೆ;

ಶ್ರೀ ಬಿ.ಎನ್. ಬಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು) :
ಅ) ಸರ್ಕಾರದ ಗಮನಕ್ಕೆ ಬಂದಿದೆ.

Yes, has come to the notice of the Government.